ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. 850/2014

| | | | |
|---|---|---|---|
| ಸಾಕ್ಷಿದಾರರು ಹೆಸರು | : | ಮಹದೇವಸ್ವಾಮಿ | ದಿನಾಂಕಃ 22.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : | ಜೇನುಮಲ್ಲಶೆಟ್ಟಿ | |
| ವಯಸ್ಸು | : | 36 ವರ್ಷ | |
| ಉದ್ಯೋಗ | : | ಖಾಸಗಿ ಕೆಲಸ | **CW-1** |
| ವಾಸಸ್ಥಳ | : | ಚಾಮರಾಜನಗರ. | **PW-4** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಚಾಸಾ2 ರಿಂದ 6 ರವರ ಪರಿಚಯ ಇಲ್ಲಾ. ಆರೋಪಿ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ದೂರು ನೀಡಿಲ್ಲಾ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನನಗೆ ಯಾವುದೇ ಅಪಘಾತ ಆಗಿಲ್ಲಾ. ನನಗೆ ಯಾವುದೇ ಗಾಯಗಳು ಆಗಿಲ್ಲ. ಮೃತ ಅಪ್ಪಾಜಿ ಗೊತ್ತಿಲ್ಲ. ಅವರಿಗೆ ಆದ ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿ ತನ್ನ ಹೆಬ್ಬೆಟಿಟನ ಗುರುತನ್ನು ಹಾಕಿರುವುದಾಗಿ ಗುರುತಿಸಿದ್ದು, ದೂರನ್ನು ಅದನ್ನು ನಿಪಿಃ 4 ಎಂದು ಗುರುತಿಸಲಾಯಿತು. ನಿಪಿಃ 4 ಕ್ಕೆ ಯಾವಾಗ ಸಹಿ ಮಾಡಿದ್ದೇನೆ ಮತ್ತು ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

( ಮಾನ್ಯ ಎಪಿಪಿರವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಎಪಿಪಿರವರಿಂದಃ

ದಿನಾಂಕಃ 08.02.2014 ರಂದು ನಾನು ಕೆಎ 10 ಕ್ಯೂ 8444 ಬಜಾಜ್ ಪಲ್ಸರ್ ಬೈಕಿನಲ್ಲಿ ಹುಲ್ಲಹಳ್ಳಿಗೆ ಮದುವೆಗೆ ಹೋಗುತ್ತಿದ್ದಾಗ, ನನ್ನೊಂದಿಗೆ ಚಾಸಾ2 ಮತ್ತು ಮೃತ ಅಪ್ಪಾಜಿಯನ್ನು ಬೈಕಿನಲ್ಲಿ ಕೂರಿಸಿಕೊಂಡು ಕಾಡಹಳ್ಳಿ ಗ್ರಾಮದ ಕಡೆಗೆ ಹೋಗುವ ರೈಲ್ವೆ ಕ್ರಾಸಿಂಗ್ ಬಳಿ ರಸ್ತೆಯಲ್ಲಿ ರಾತ್ರಿ 8.30 ರ ಸಮಯದಲ್ಲಿ ಹೋಗುತ್ತಿದ್ದಾಗ , ಆರೋಪಿಯು ಟಿ ಎನ್ 33 ಎನ್ 2840 ಟಿ ಎನ್ ಎಸ್ ಟಿ ಸಿ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಮರಾಜನಗರದ ಕಡೆಗೆ ಚಾಲನೆ ಮಾಡಿ, ನಮ್ಮ ಬೈಕಿಗೆ ಡಿಕ್ಕಿ ಮಾಡಿದ ಪರಿಣಾಮ ನನಗೆ , ಚಾಸಾ2 ಮತ್ತು ಮೃತ ಅಪ್ಪಾಜಿಯವರಿಗೆ ಗಾಯಗಳಾಗಿ ರಾತ್ರಿ 11.15 ರ ಸಮಯದಲ್ಲಿ ಅಪ್ಪಾಜಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನಿಪಿಃ 4 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕಃ 10.02.2014 ರಂದು ಆರೋಪಿಯನ್ನು ನೋಡಿ ಗುರುತಿಸಿ ಮತ್ತು ನನಗೆ ಡಿ ಎಲ್ ಇಲ್ಲದೇ ಇರುವ ಬಗ್ಗೆ ಈಗ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿಃ 5 ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ರಾಜಿ ಮಾಡಿಕೊಂಡ ಕಾರಣ ಆರೋಪಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.